ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಚೇರಿ, ನಂ:16, 2ನೇ ರಾಜಭವನ ರಸ್ತೆ, ಪಿ.ಬಿ.ನಂ.5309,
ಬೆಂಗಳೂರು-01, ಇ-ಮೇಲ್ bngdam@kar.nic.in, ದೂ:080-22867840, Fax-080-22864375--

**ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಹಾಗೂ ಮೇಲ್ಮನವಿ ಪ್ರಾಧಿಕಾರಿ, ಇವರ ನಡವಳಿಗಳು**

**ಉಪಸ್ಥಿತಿ: ಕರೀಗೌಡ, ಭಾ.ಆ.ಸೇ**

**ಅಪೀಲು ಸಂಖ್ಯೆ:ಕೃಮಾಇ/ಅಭಿವಿ-1/ಅಪೀಲು/294/2019-20 ದಿನಾಂಕ:25-10-2019**

| ವಾದಿಗಳು | ಪ್ರತಿವಾದಿಗಳು |
|---|---|
| ಮೆ:ಶ್ರೀಶೈಲ ಎಂಟರ್‌ಪ್ರೈಸಸ್, ನಂ.49/2, ನೆಲಮಹಡಿ, ಲಾರಿ ಗೋದಾಮು ರಸ್ತೆ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು<br><br>(ವಕೀಲರು: ಸತೀಶಚಂದ್ರ) | ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು. |

**ವಿಷಯ:-** ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮೆ॥ ಶ್ರೀಶೈಲ ಎಂಟರ್‌ಪ್ರೈಸಸ್, ಇವರಿಗೆ ಮಳಿಗೆ ಸಂ:29/2, ಇದನ್ನು ತಾತ್ಕಾಲಿಕವಾಗಿ ಹಾಗೂ ಕೇಳಿದಾಗ ಬಿಟ್ಟುಕೊಡುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಿದ್ದು, ಸದರಿ ಮಳಿಗೆಯಲ್ಲಿ ವ್ಯಾಪಾರವನ್ನು ಮುಂದುವರೆಸಲು ಅನುಮತಿಗಾಗಿ ಮೇಲ್ಮನವಿ.

**********

**ಪ್ರಸ್ತಾವನೆ:-**

**ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಗಳು 2004ರ** ನಿಯಮ-23ರಡಿಯಲ್ಲಿ ಮೇಲ್ಮನವಿ ಅರ್ಜಿಯನ್ನು ವಕೀಲರು ವಕಾಲತ್ತು ಹಾಗೂ ದಾಖಲೆಗಳೊಂದಿಗೆ ಸಲ್ಲಿಸಿರುತ್ತಾರೆ. ಮೇಲ್ಮನವಿಯಲ್ಲಿ ಪ್ರತಿವಾದಿಯು ದಿನಾಂಕ:5-8-2019ರಲ್ಲಿ ನೀಡಿರುವ ನೋಟೀಸ್‌ನ್ನು ಮಾರುಕಟ್ಟೆ ವರ್ಷದ ಕೊನೆಯಲ್ಲಿ ಮಳಿಗೆ ತೆರವುಗೊಳಿಸಲು ನೀಡಿರುವ ನೋಟೀಸೆಂದು ಪರಿಗಣಿಸಲು ಮತ್ತು ಸದರಿ ಮಳಿಗೆಯಲ್ಲಿ ಮಾರುಕಟ್ಟೆ ವರ್ಷದ ಅಂತ್ಯದವರೆಗೆ ವ್ಯಾಪಾರ ವಹಿವಾಟನ್ನು ಮುಂದುವರೆಸಲು ಪ್ರತಿವಾದಿಗೆ ನಿರ್ದೇಶನ ನೀಡಬೇಕೆಂದು ಕೋರಿಕೆ ಇರುತ್ತದೆ.

ದಿ:25-10-2019ರಂದು ನಡೆದ ವಿಚಾರಣಾ ಸಂದರ್ಭದಲ್ಲಿ ಸದರಿಯವರ ಮೇಲ್ಮನವಿಯನ್ನು ಅಂಗೀಕರಿಸುವ ಕುರಿತು ಪರಿಶೀಲಿಸಲಾಗಿದೆ. ವಾದಿ ಪರ ವಕೀಲರು ಹಾಜರಿರುತ್ತಾರೆ. ದಿ:5-8-2019ರಲ್ಲಿ ಪ್ರತಿವಾದಿಯು ನೀಡಿರುವ ನೋಟೀಸ್ ನ್ನು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ ರಿಟ್ ಅರ್ಜಿ ಸಂಖ್ಯೆ:35262/2019 ರಲ್ಲಿ ದಾಖಲಿಸಿದ್ದು ಮಾನ್ಯ ನ್ಯಾಯಾಲಯವು ದಿ:19-8-2019ರಲ್ಲಿ ಆದೇಶ ನೀಡಿರುತ್ತದೆ. ಸದರಿ ಆದೇಶದಲ್ಲಿ ಪ್ರತಿವಾದಿಗಳಿಗೆ

ನೋಟೀಸ್ ಜಾರಿಗೊಳಿಸಿದ್ದು ದಿ:5-8-2019ರ ಪ್ರತಿವಾದಿ ನೀಡಿರುವ ನೋಟೀಸ್‌ಗೆ 4 ವಾರಗಳ ಅವಧಿಗೆ ತಡೆಯಾಜ್ಞೆ ನೀಡಲಾಗಿದೆ. ಪ್ರತಿವಾದಿಯು ಮಾನ್ಯ ನ್ಯಾಯಾಲಯದ ಆದೇಶದ ಪೂರ್ವದಲ್ಲಿ ಅಂದರೆ ದಿ:06-08-2019ರಂದು ಮಹಜರ್ ದಾಖಲಿಸಿ, ಸಮಿತಿ ವಶಕ್ಕೆ ಪಡೆದಿರುವುದನ್ನು ಗಮನಿಸಲಾಗಿದೆ. ಮಾನ್ಯ ನ್ಯಾಯಾಲಯದಲ್ಲಿ ಈಗಾಗಲೇ ಪ್ರಕರಣವಿದ್ದು ಮಧ್ಯಂತರ ಆದೇಶವೂ ಇರುವುದನ್ನು ಪರಿಗಣಿಸಿ ಮೇಲ್ಮನವಿ ಸಂಬಂಧ ಈ ಕೆಳಗಿನಂತೆ ಆದೇಶ ಮಾಡಿದೆ.

## ಆದೇಶ

ವಾದಿಯು ಸಲ್ಲಿಸಿರುವ ಮೇಲ್ಮನವಿಯಲ್ಲಿ ಪ್ರತಿವಾದಿಯು ನೀಡಿರುವ ದಿ:5-8-2019ರ ನೋಟೀಸ್ ಪ್ರಸ್ತಾಪವಿದ್ದು ಅದಕ್ಕೆ ಸಂಬಂದಿಸಿದಂತೆ ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯವು ದಿ:19-8-2019ರ ಆದೇಶದಲ್ಲಿ 4 ವಾರಗಳವರೆಗೆ ತಡೆಯಾಜ್ಞೆ ನೀಡಿರುವ ಅಂಶ ಪರಿಗಣಿಸಿ ಪ್ರಸ್ತುತ ಮೇಲ್ಮನವಿಯಲ್ಲಿನ ಅಂಶವು ಮಾನ್ಯ ನ್ಯಾಯಾಲಯದ ಪರಿಶೀಲನೆಗೆ ಒಳಪಟ್ಟಿರುವುದರಿಂದ ಈ ಪ್ರಾಧಿಕಾರದ ಮುಂದೆ ಸಲ್ಲಿಸಿದ ಮೇಲ್ಮನವಿಯನ್ನು ಅಂಗೀಕರಿಸುವುದು ಸೂಕ್ತವಲ್ಲವೆಂದು ಪರಿಗಣಿಸಿ ಮೇಲ್ಮನವಿ ಅರ್ಜಿಯನ್ನು ವಿಚಾರಣೆಗೆ ಅಂಗೀಕಾರ ಹಂತದಲ್ಲೇ ವಜಾಗೊಳಿಸಿದೆ.

ಈ ಆದೇಶವನ್ನು ದಿ:-25-10-2019ರಂದು ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡಿ ಹೊರಡಿಸಲಾಗಿದೆ.

25/x/19

ನಿರ್ದೇಶಕರು ಹಾಗೂ ಅಪೀಲು ಪ್ರಾಧಿಕಾರಿ